ಹೋಗಿಬಿಡುತ್ತವೆ. ಗೊತ್ತಾಗುವ ಹೊತ್ತಿಗೆ ಮರಣವೇ ಮುಂದಿನ ನಿಲ್ದಾಣವಾಗಿರುತ್ತದೆ.

"ಹೀಗಾಗುವುದಕ್ಕೂ ಮುಂಚೆ ಅಪ್ಪ ಏನೇನು ಮಾಡಿದ್ದರು? ಹೀಗಾಗುವಾಗ ಎಲ್ಲಿದ್ದರು? ಇದೆಲ್ಲ ನಿನಗೆ ಗೊತ್ತೇ?" ಮಂದಾರಳನ್ನು ಕೇಳಿದೆ.

"ಅಮ್ಮ, ಅಜ್ಜಿಯ ಮನೆಯಲ್ಲಿದ್ದಾಳಲ್ಲಾ, ಹಾಗಾಗಿ ಅಪ್ಪ ಚಿಕ್ಕಪ್ಪನ ಮನೆಯಲ್ಲಿ ಊಟ ಮಾಡಿದ್ನಂತೆ. ಊಟಕ್ಕೂ ಮುನ್ನ ಇಂತಿಂಥಾ ದೊಡ್ಡ ಕುಂಟೆಗಳನ್ನು ತಾನೇ ಸೀಳಿ ಕಟ್ಟಿಗೆ ಮಾಡಿದ್ದನಂತೆ. ಊಟ ಮಾಡಿದವನು ಹಾಗೇ ಜಗುಲಿಯಲ್ಲೇ ಮಲಗಿಕೊಂಡನಂತೆ. ಮಲಗಿದ ಸ್ವಲ್ಪ ಹೊತ್ತಿಗೇ ಏನೇನೋ ಬಡಬಡಿಸತೊಡಗಿದನಂತೆ. ಅಲ್ಲೇ ಕೋಣೆಯೊಳಗಿನಿಂದ ಬಂದ ಚಿಕ್ಕಮ್ಮ ಭಾವಾ ಭಾವಾ ಅಂತ ಎಷ್ಟು ಕರೆದರೂ ಏಳಲಿಲ್ಲವಂತೆ. ಸುಮಾರು ಹದಿನೈದು ನಿಮಿಷ ಕಳೆದರೂ ಅವನಿಗೆ ಎಚ್ಚರವಾಗದೇ ಹೋದಾಗ ಊರಿನ ಡಾಕ್ಟರನ್ನು ಕರೆಸಿದರಂತೆ. ಅವರು ಇಂಜಕ್ಷನ್ ಕೊಟ್ಟು ಸ್ವಲ್ಪ ತಡೆಯಿರಿ ಎಂದರಂತೆ. ಆದರೆ, ಬಳಿಕವೂ ಏನೂ ಸುಧಾರಣೆಯಾಗದೇ ಹೋಗಿದ್ದರಿಂದ ನೇರ ಸಿಟಿಗೆ ಕೊಂಡೊಯ್ದರಂತೆ..."

ತನಗೆ ಬಂದ ಅಂತೆಗಳನ್ನು ಹಾಗೆಯೇ ನನಗೆ ದಾಟಿಸಿದಳು ಮಂದಾ. ಇದನ್ನೆಲ್ಲಾ ಅವಳ ಚಿಕ್ಕಪ್ಪನ ನೆರೆ ಮನೆಯವನಾದ ಸೀನಣ್ಣ ಅವಳಿಗೆ ಹೇಳಿದ್ದ. ಅವಳ ಮಾತಿನಿಂದಾಚೆ ಉಳಿದ ಸಂಗತಿಗಳನ್ನು ನಾನು ನೇರ ನಾಣಿ ಮಾವನ ತಮ್ಮನಾದ ಮಾಧವ ಮಾವನ ಮನೆಯಲ್ಲೇ ಸಂಗ್ರಹಿಸಬೇಕೆಂದು ನಿರ್ಧರಿಸಿಕೊಂಡೆ. ಆ ಹೊತ್ತಿಗಾಗಲೇ ನಾಣಿ ಮಾವನ ಆಪರೇಷನ್ನಾಗಿ ಮೂರು ದಿನಗಳು ಕಳೆದಿದ್ದವು. ಅವನ ಎಡತಲೆಯ ಚಿಪ್ಪನ್ನು ಕತ್ತರಿಸಿ ತೆಗೆದ ವೈದ್ಯರು ಮೆದುಳಿಗೆ ಶಸ್ತ್ರಚಿಕಿತ್ಸೆ ಮಾಡಿದ್ದರು. ಆದರೆ, ಅಷ್ಟರೊಳಗಾಗಲೇ ಮಾವನ ಬಲಗೈ, ಮಾತು ಹಾಗೂ ಬಲಗಾಲುಗಳು ಚಲನೆ ನಿಲ್ಲಿಸಿಬಿಟ್ಟಿದ್ದವು.

"ಮಿತಿ ಮೀರಿದ ಹೈಪರ್ ಟೆನ್ಷನ್‌ನಿಂದಾಗಿ, ತಲೆಯೊಳಗೆ ರಕ್ತನಾಳವೊಂದರ ಮೇಲೆ ಒತ್ತಡ ಹೆಚ್ಚಿ ಅದು ಒಡೆದಿದೆ. ಹೀಗೆ ಒಡೆದ ನಾಳದಿಂದ ಚೆಲ್ಲಾಡಿದ ರಕ್ತ ಹೆಪ್ಪುಗಟ್ಟಿ, ಮೆದುಳಿನ ಮೇಲೆಲ್ಲಾ ಶೇಖರವಾಗಿದೆ. ಅದನ್ನು ವೈದ್ಯಕೀಯ ಭಾಷೆಯಲ್ಲಿ ಹೆಮಟೋಮಾ ಎನ್ನುತ್ತೇವೆ. ಈ ಮೆದುಳು ಹಾಗೂ ತಲೆಯ ಚಿಪ್ಪಿನ ಮಧ್ಯೆ ಇರುವ ಜಾಗ ತುಂಬಾ ಕಡಿಮೆ. ಇಲ್ಲಿ ಬೇರೆ ಯಾವುದೇ ವಸ್ತು ಸೇರಿಕೊಂಡರೂ ಇಕ್ಕಟ್ಟಾಗಿ ಮೆದುಳಿನ ಮೇಲೆ ಒತ್ತಡ ಬೀಳುತ್ತದೆ. ಅಲ್ಲದೆ ಹೀಗೆ ಸೇರಿಕೊಳ್ಳುವ ವಸ್ತುವಿನಿಂದ, ಆ ಭಾಗದ ಜೀವಕೋಶಗಳು ಸಾಯತೊಡಗುತ್ತವೆ. ಹೀಗಾದಾಗ ಆ ಭಾಗಕ್ಕೆ ಸಂಬಂಧಿಸಿದ ಅವಯವಗಳು ಕೆಲಸ ಮಾಡಲಾರದಾಗುತ್ತವೆ. ಈ ಕೇಸ್‌ನಲ್ಲಿ ಇವರ ಎಡ ಮೆದುಳಿನೊಳಗೆ ರಕ್ತಸ್ರಾವವಾಗಿದೆ. ಹಾಗಾಗಿ, ಇವರ ಬಲಗೈ, ಬಲಗಾಲು ಹಾಗೂ ಮಾತುಗಳು ಸ್ಥಗಿತವಾಗಿವೆ."

ನ್ಯೂರಾಲಜಿಸ್ಟ್ ಡಾಕ್ಟರ್ ಪ್ರಶಾಂತರ ಮಾತನ್ನು ಆಸಕ್ತಿಯಿಂದ ಕೇಳಿಸಿಕೊಳ್ಳುತ್ತಾ ಹೋದೆ. ಅವರ ವಿವರಣೆ ನನ್ನೊಳಗೊಂದಿಷ್ಟು ಪ್ರಶ್ನೆಗಳನ್ನು ಹುಟ್ಟುಹಾಕಿತ್ತು.

"ಹಾಗಾದರೆ ಮಾವನಿಗಾಗಿರುವುದು ಹೆಮರೇಜಾ ಅಥವಾ ಸ್ಟ್ರೋಕಾ ಸರ್?"

"ಹೆಮರೇಜಿಕ್ ಸ್ಟ್ರೋಕ್. ಇದು ಸ್ಟ್ರೋಕ್ ಅಥವಾ ಲಕ್ವ ಅಂತ ಏನಂತೀವಿ ನೋಡೀ, ಅದರ ಎರಡನೆಯ ವಿಧ. ಮೊದಲನೆಯದು ಇಸ್ಕೀಮಿಕ್ ಸ್ಟ್ರೋಕ್. ಅದರಲ್ಲಿ ಏನಾಗುತ್ತೇಂದ್ರೆ, ಅತಿಯಾದ ರಕ್ತದೊತ್ತಡದಿಂದ ತಲೆಯೊಳಗಿನ ಯಾವುದೋ ಒಂದು ನಾಳ ಬ್ಲಾಕ್ ಆಗಿ ರಕ್ತ ಮುಂದೆ ಹೋಗದಾಗುತ್ತೆ. ಆಗ ಆ ನಾಳವು ರಕ್ತವನ್ನ ಒಯ್ದು ತಲುಪಿಸಬೇಕಾಗಿದ್ದ ಮೆದುಳಿನ ಒಂದು ಭಾಗವಿರುತ್ತದಲ್ಲಾ, ಆ ಭಾಗಕ್ಕೆ ರಕ್ತ ಪೂರೈಕೆಯಾಗದೇ ಅಲ್ಲಿನ ಜೀವಕೋಶಗಳು ಸಾಯುತ್ತವೆ. ಆಗ ಮೆದುಳಿನ ಆ ಭಾಗದ ನಿಯಂತ್ರಣದಲ್ಲಿದ್ದ ದೇಹದ ಭಾಗಗಳು ಕೆಲಸ ನಿಲ್ಲಿಸುತ್ತವೆ. ಹೆಮರೇಜ್ ಅಂದರೆ ಇದರದ್ದೇ ಮುಂದುವರೆದ ಭಾಗ. ಯಾವುದೋ ಕಾರಣಕ್ಕೆ ರಕ್ತನಾಳ ಬ್ಲಾಕ್ ಆದಾಗ